ಶ್ರೀ ಎಚ್. ಬಿ. ಜ್ವಾಲನಯ್ಯ.—1.04 ಕೋಟಿ ರೂಪಾಯಿ ವಿದೇಶಿ ವಿನಿಮಯವನ್ನು ಗಳಿಸಿರಾಗಿದೆ ಎಂದು ತಿಳಿಸಿದ್ದಾರೆ. ಈ ಹಣವನ್ನು ಆ ಕೈಗಾರಿಕೆಯ ಪ್ರಗತಿಗಾಗಿ ಖರ್ಚು ಮಾಡುವ ಅಧಿಕಾರವನ್ನು ಅವರಿಗೇ ಬಿಡರಾಗಿದೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದು ಇಂಡಿಯಾ ಸರ್ಕಾರಕ್ಕೆ ಬಂದಿದೆ. ವಿದೇಶಿ ವಿನಿಮಯವನ್ನು ಗಳಿಸಲು ಯಾರು ಏನು ರಫ್ತು ಮಾಡಿದ್ದಾರೆಯೋ ಅವರಿಗೆ ಇಂಡಿಯಾ ಸರ್ಕಾರದವರು ಸಹಾಯವನ್ನು ಕೊಟ್ಟಿದ್ದಾರೆಂದು ಕಾಣುತ್ತದೆ.

ಶ್ರೀ ಬೋಳಾ ರಘುರಾಮಶೆಟ್ಟಿ.—ಸಮಾಜವಾದವನ್ನು ಪ್ರತಿಪಾದನೆ ಮಾಡುವ ಸರ್ಕಾರ ಈ ಉದ್ಯಮವನ್ನು ಇನ್ನೂ ರಾಷ್ಟ್ರೀಕರಣ ಮಾಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ರಾಷ್ಟ್ರೀಕರಣ ಮಾಡಬೇಕೆಂಬ ಉದ್ದೇಶವಿಲ್ಲ. ಖಾಸಗಿಯವರಿಗೆ ಮತ್ತು ಸಹಕಾರಿ ಕ್ಷೇತ್ರದಲ್ಲಿ ಏನನ್ನು ಹಿಡಿಯುವ ಉದ್ಯಮದಲ್ಲಿ ತೊಡಗಿರುವವರಿಗೆ ರಾಷ್ಟ್ರೀಕರಣ ಮಾಡಿ ತೊಂದರೆಪಡಿಸಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಸದ್ಯಕ್ಕೆ ಫಿಷರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮುಖಾಂತರ ಐಸ್ ಪ್ಲಾಂಟ್, ಕೋಲ್ಡ್ ಸ್ಟೋರೇಜಸ್ ಮತ್ತು ಫಿಷಿಂಗ್ ಯಾರ್ಡ್, ಬೋಟ್ ಬಿಲ್ಡಿಂಗ್ ಯಾರ್ಡ್ ಇವನ್ನೆಲ್ಲ ತೆಗೆದುಕೊಂಡು ಡೀಪ್ ಸೀ ಫಿಷಿಂಗೆ ಅವಕಾಶ ಹೆಚ್ಚು ಮಾಡಿ ಕಮರ್ಷಿಯಲ್ ಲೈನ್ಸ್ ಮೇರೆ ಈ ಸಂಸ್ಥೆಯನ್ನು ನಡೆಸಿಕೊಂಡು ಹೆಚ್ಚು ಸಂಪಾದನೆ ಮಾಡಬೇಕೆಂಬ ಉದ್ದೇಶವಿದೆ.

Sri V. N. PATIL.—In view of the fact that fish has been considered as one of the most important items of food, has Government considered seriously the question of nationalisation of fisheries in the coastal areas so as to increase the output and solve the food problem to a considerable extent ?

Sri H. C. LINGA REDDY.—That is covered by the next question, Sir.

ಶ್ರೀ ಬಿ. ಭಾನ್ಕರ ಶೆಟ್ಟಿ.—ಕಾರ್ಪೊರೇಷನ್ ಯಾವಾಗ ಆಗುವುದೆಂಬುದನ್ನು ನಿರ್ದಿಷ್ಟವಾಗಿ ಹೇಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ವಿಷಯ ಸರಕಾರದ ಪರ್ಯಾಲೋಚನೆಯಲ್ಲಿದೆ, ಮಾಡುವುದಾದರೆ ಯಾವಾಗ ಮಾಡಬೇಕೆಂಬುದನ್ನು ತೀರ್ಮಾನ ಮಾಡುತ್ತೇವೆ.

Nationalisation of Sea Wealth

284. Sri RATNAKUMAR KATTEMAR (Mudabidri).—

Will the Minister of State for Ports and Fisheries be pleased to state :—

whether there is any proposal to undertake Nationalisation of sea wealth such as export business of Fish Product ?

Sri H. C. LINGA REDDY (Minister of State for Ports and Fisheries).—

No.

ಶ್ರೀ ಬಿ. ಭಾನ್ಕರ ಶೆಟ್ಟಿ.—ಸಾಗರ ಸಂಪತ್ತನ್ನು ರಫ್ತು ಮಾಡುವ ಕಾರ್ಯವನ್ನು ರಾಷ್ಟ್ರೀಕರಣಗೊಳಿಸುವ ಸುಳಹೆ ಇಲ್ಲವೆಂದು ಉತ್ತರ ಕೊಡರಾಗಿದೆ. ಇದು ಸಮಾಜವಾದೀ ಧೋರಣೆಗೆ ವಿರುದ್ಧವಾಗಿಲ್ಲವೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎಲ್ಲವನ್ನೂ ರಾಷ್ಟ್ರೀಕರಣ ಮಾಡಬೇಕೆಂಬ ನೀತಿಯನ್ನು ಸರಕಾರ ಇಟ್ಟುಕೊಂಡಿಲ್ಲ. ಸಮುದ್ರದಲ್ಲಿ ದೊರೆಯುವ ಏನು ಸಂಪತ್ತನ್ನು ರಾಷ್ಟ್ರೀಕರಣ ಮಾಡಬೇಕೇ ಬೇಡವೇ ಎಂಬುದು ಪರಿಶೀಲಿಸಿ ಮಾಡಬೇಕಾದ ವಿಷಯ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವಿಚಾರವನ್ನು ಅಧ್ಯಯನ ಮಾಡಲು ಮಾನ್ಯ ಮಂತ್ರಿಗಳು ವಿದೇಶಯಾತ್ರೆ ಮಾಡಿಬರಲು ಕಾರ್ಯಕ್ರಮ ಹಾಕಿಕೊಳ್ಳುವರೇ ? ಅಧ್ಯಯನ ಮಾಡಿಬರಲು ಯಾವಾಗ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

Sri H. C. LINGA REDDY.—As early as possible.

ಶ್ರೀ ಬಸವರಾಜು.—ಈ ವಿಚಾರವನ್ನು ಆಲೋಚನೆ ಮಾಡುವುದು ನೂಕ್ಕುವಲ್ಲವೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇದರ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ತಮ್ಮ ಸಲಹೆ ಪಡೆದು ಒಂದು ನಿರ್ಧಾರಕ್ಕೆ ಬರಬೇಕಾದ ವಿಚಾರ ಇದು.

ಶ್ರೀ ಬಿ. ಎಂ. ಇದಿನಬ್ಬ.—ಸರಕಾರ ಮತ್ತು ಖಾಸಗಿಯವರೂ ಕೂಡ ಈ ವಿಚಾರದಲ್ಲಿ ಮುಂದುವರೆದರೆ ಒಳ್ಳೆಯದಾಗುವದಲ್ಲವೇ ?

Sri H. C. LINGA REDDY.—I agree with the suggestion of the hon. Member.

ಶ್ರೀ ಎಚ್. ಬಿ. ಪ್ಯಾಲನಯ್ಯ.—ಮಾನ್ಯ ಮಂತ್ರಿಗಳು ಸಾಗರ ಸಂಪತ್ತನ್ನು ರಾಷ್ಟ್ರೀಕರಣ ಮಾಡಬೇಕೆಂದಿರುವ ಕಾಂಗ್ರೆಸ್ ಗುಂಪಿಗೆ ಸೇರಿದವರೋ ಅಥವಾ ಮಾಡಬಾರದು, ಅವನ್ನು ವಿರೋಧಿಸಬೇಕು ಎಂದಿರುವ ಕಾಂಗ್ರೆಸ್ ಗುಂಪಿಗೆ ಸೇರಿದವರೋ ?

Sri H. C. LINGA REDDY.—That question does not arise.

Sri B. B. SAYANAK.—May I know whether the Congress Syndicate in Mysore State is opposing the nationalisation of sea wealth ?

Sri H. C. LINGA REDDY.—That does not arise.

Mr. SPEAKER.—Sri V. N. Patil may put the next Question No. 327.

Pending Cases on Central Government Employees who went on Token Strike

327. Sri M. S. KRISHNAN (Malleswaram).—

Will the Chief Minister be pleased to state :—

(*a*) the number of cases pending at present in Courts in connection with the token strike of the Central Government Employees on September 19th, 1968 (under the Essential Services Maintenance Ordinance, ESMO) ; information may be furnished as follows :

(i) Sectionwise (*i.e.*, 4, 5 or 6 ESMO)

(ii) Departmentwise (*i.e.*, P. & T., Railways, Survey of India, Civil Aviation, etc.) ;

(*b*) the steps so far taken by the Government of Mysore to withdraw legal proceedings against the Central Government employees charged under the ESMO, in pursuance of the policy statement of the Government of India ;